ಶಿಕ್ಷೆಯಾಗಬೇಕು. ಕೇವಲ ಒನ್ ಸೈಡೆಡ್ ಆದರೆ ತಪ್ಪಾಗುತ್ತದೆ. ಆದರೆ ಈ ರೀತಿ ಖರ್ಗೆಯವರು ಮಾಡುವುದಿಲ್ಲವೆಂದು ನನಗೆ ವಿಶ್ವಾಸವಿದೆ. ಗೃಹ ಸಚಿವರು ಈ ಸಂಬಂಧದ ಅಧಿಕಾರಿಗಳಿಗೆ ಒಂದು ಸ್ಪಷ್ಟವಾದ ಸಂದೇಶ ಕೊಡಬೇಕು. ಇದರ ಬಗ್ಗೆ ತಕ್ಷಣದ ಲ್ಲಿಯೇ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಹಾಗೂ ಹಂಪನಗೌಡರು ಸಿಂಧನೂರಿನ ಉಪ್ಪಳದಲ್ಲಿ ನಡೆದಿರುವ ಗಲಭೆ ಬಗ್ಗೆ ಸದನದಲ್ಲಿ ಪ್ರಸ್ತಾಪಮಾಡಿ ನನ್ನ ಗಮನಕ್ಕೆ ತಂದಿದ್ದಾರೆ. ನಾನು ಸಂಬಂಧಪಟ್ಟ ಎಸ್. ಪಿ. ಯಿಂದ ವರದಿಯನ್ನು ತರಿಸಿಕೊಂಡು ಯಾರು ತಪ್ಪಿಕಸ್ಥರಿರುತ್ತಾರೋ ಅವರ ಮೇಲೆ ಕ್ರಮ ಜರುಗಿಸಬೇಕೆಂದು ನಾನು ಹೇಳುತ್ತೇನೆ. ಆದರೆ ನಮಗೆ ಮೊದಲು ಪ್ರಿಮಿಮ್ ಎನ್ಕ್ವೈರಿ ಮಾಡಿದ ವರದಿಯಾದರೂ ಬರಬೇಕು. ಹಂಪನಗೌಡರಿಗೆ ತಿಳಿದಿರುವ ಹಾಗೆ ಸಿಂಧನೂರಿನಲ್ಲಿ ಇಂಥ ಗಲಭೆ ನಡೆಯುತ್ತಿರುವುದು ಇದೇ ಮೊದಲೇನಲ್ಲ. ಹತ್ತಾರು ವರ್ಷಗಳಿಂದ ಪರಸ್ಪರಾ ಹಾಗೂ ವಿರುದ್ಧವಾಗಿ ಗಲಭೆಗಳು ನಡೆಯುತ್ತಲೇ ಇರುತ್ತದೆ. ಆದರೆ ಇದಕ್ಕೆ ಯಾವುದೋ ಒಂದು ಗುಂಪಿನವರು ಕಾರಣಕರ್ತರು ಎಂದು ಹೇಳುವುದಕ್ಕೆ ಬರುವುದಿಲ್ಲ. ಅಲ್ಲಿ ಸಾಮಾಜಿಕ ವ್ಯವಸ್ಥೆಯೇ ಹಾಗಿದೆಯೋ ಅಥವಾ ರಾಜಕೀಯ ಬದಲಾವಣೆಯೇ ಹಾಗಿದೆಯೋ ನನಗಂತೂ ಗೊತ್ತಿಲ್ಲ. ಸಿಂಧೂನೂರುನಲ್ಲಿ ಗಲಾಟೆಯಾಗುವಂಥಾದ್ದು ವಿಶೇಷವಾಗಿ ಚುನಾವಣೆ ಮುಂಚೆ ಮತ್ತು ನಂತರ ಆಗುತ್ತದೆ. ಈಗ ತಾವು ತಿಳಿಸಿರುವಂಥ ವಿಷಯದ ಬಗ್ಗೆ ಸಂಬಂಧಪಟ್ಟಂತಹ ಎಸ್. ಪಿ. ಯವರಿಂದ ಮಾಹಿತಿಯನ್ನು ತರಿಸಿ ಕೊಂಡು ಮುಂದಿನ ಕ್ರಮವನ್ನು ಜರುಗಿಸುತ್ತೇನೆ.

(ಇ) ವಿಜಾಪುರದ ಹತ್ತಿರ ಮನವಳ್ಳಿ ಕ್ರಾಸ್ ಹತ್ತಿರ ಎರಡು ಲಾರಿಗಳು ಡಿಕ್ಕಿ ಹೊಡೆದು 25 ಜನ ಸತ್ತಿರುವುದು ಹಾಗೂ 44 ಜನರಿಗೆ ಗಾಯಗಳಾಗಿರುವುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನನಗೆ ಈಗ ತಾನೇ ವಿಷಯ ಗಮನಕ್ಕೆ ತಂದಿರುವಂಥಾದ್ದು ವಿಜಾಪುರದ ಹತ್ತಿರ ಮನವಳ್ಳಿ ಕ್ರಾಸ್ ಹತ್ತಿರ ಇವತ್ತು ಬೆಳಗಿನ ಜಾವ ಎರಡು ಲಾರಿಗಳು ಡಿಕ್ಕಿ ಹೊಡೆದು 25 ಜನರು ಸತ್ತಿದ್ದಾರೆ, 44 ಜನರಿಗೆ ಗಾಯಗಳಾಗಿದೆ. ಇದೊಂದು ದೊಡ್ಡ ದುರಂತವಾಗಿದೆ, ಅಲ್ಲಿ ಸರಿಯಾದಂತಹ ವ್ಯವಸ್ಥೆಯಾಗುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಸರ್ಕಾರ ಇವರ ಬಗ್ಗೆ ಮುತವರ್ಜಿಯನ್ನು ವಹಿಸಬೇಕೆಂದು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ನಮ್ಮ ಡಿ. ಜಿ. ಪಿ. ಯವರು ಸಂಬಂಧಪಟ್ಟಂತಹ ಎಸ್. ಪಿ. ಯವರನ್ನು ಸಂಪರ್ಕಿಸಿ ಅಲ್ಲಿ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳಿದ್ದಾರೆ. ತಾವು ಸಹ ಪುನಃ ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದೀರಿ, ಈಗ ನಾನೇ ಸ್ವತಃ ಅಲ್ಲಿನ ಎಸ್. ಪಿ. ಯವರೊಡನೆ ಮಾತನಾಡಿ ಇದರ ಬಗ್ಗೆ ವ್ಯವಸ್ಥೆಯನ್ನು ಮಾಡುತ್ತೇನೆ.

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನಾಥಾಶ್ರಮ ಮತ್ತು ವೃದ್ಧಾಶ್ರಮಕ್ಕೆ ಹಣ ಬಿಡುಗಡೆ.

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತಹ ಅನಾಥಾಶ್ರಮ ಮತ್ತು ವೃದ್ಧಾಶ್ರಮಕ್ಕೆ ಏಪ್ರಿಲ್ 1999ರಿಂದ ಹಣ ಬಿಡುಗಡೆಯಾಗಬೇಕಾಗಿತ್ತು. ಇದುವರೆಗೂ ಆದರೆ ದಿನಾಂಕ : 31-3-2000ರವರೆಗೂ ಈ ಗ್ರಾಂಟ್ ಬಿಡುಗಡೆಯಾಗಿಲ್ಲ. ಇವತ್ತು